## ಒಂಬತ್ತು ಮಂದಿರಗಳ ಸಂಕೀರ್ಣ

ಆಲಂಪುರದಲ್ಲಿ ಗಮನ ಸೆಳೆಯುವ ಮನಮೋಹಕ ವಾಸ್ತುಶಿಲ್ಪದ 'ನವಬ್ರಹ್ಮ ಮಂದಿರ'ಗಳ ಸಂಕೀರ್ಣವಿದೆ. ವಿಶಿಷ್ಟ ಸೌಂದರ್ಯ ಹಾಗೂ ವಾಸ್ತುಶಿಲ್ಪ ಈ ದೇಗುಲ ಸಂಕೀರ್ಣದ ಪ್ರಮುಖ ಆಕರ್ಷಣೆ.

ಇತಿಹಾಸ ಹೇಳುವಂತೆ, ಬಾದಾಮಿಯ ಚಾಲುಕ್ಯರು ಉತ್ತರ ಮತ್ತು ಪಶ್ಚಿಮ ಭಾರತದಿಂದ 'ನಗರ' ಶೈಲಿಯನ್ನು ದಕ್ಷಿಣಕ್ಕೆ ತಂದರು. 7 ಮತ್ತು 8ನೇ ಶತಮಾನದ ಪೂರ್ವ ಭಾಗದಲ್ಲಿ ಬಾದಾಮಿಯ ಚಾಲುಕ್ಯ ರಾಜರಿಂದ ನಿರ್ಮಾಣಗೊಂಡ ಆಲಂಪುರದ ನವಬಹ್ಮ ಮಂದಿರಗಳೂ ಇದೇ 'ನಗರ' ಶೈಲಿಯಲ್ಲಿದ್ದು ಬಾದಾಮಿ, ಪಟ್ಟದಕಲ್ಲು, ಐಹೊಳೆಯಲ್ಲಿರುವ ಮಂದಿರಗಳನ್ನು ಹೋಲುತ್ತದೆ. ರಾಜಸ್ಥಾನದಲ್ಲೂ ಇದೇ ಮಾದರಿಯ ಮಂದಿರಗಳನ್ನು ನೋಡಬಹುದು. ಇಲ್ಲಿ 9 ಮಂದಿರಗಳಿವೆ. ಹೆಸರಿನಲ್ಲಿ ಬ್ರಹ್ಮನಿದ್ದರೂ ಇವೆಲ್ಲವೂ ಶಿವನ ಮಂದಿರಗಳೆನ್ನುವುದು ವಿಶೇಷ. ತಾರಕ ಬ್ರಹ್ಮ, ಸ್ವರ್ಗ ಬ್ರಹ್ಮ, ಪದ್ಮ ಬ್ರಹ್ಮ, ಬಾಲ ಬ್ರಹ್ಮ, ಗರುಡ ಬ್ರಹ್ಮ, ಕುಮಾರ ಬ್ರಹ್ಮ, ಅರ್ಕ ಬ್ರಹ್ಮ, ವಿಶ್ವ ಬ್ರಹ್ಮ, ವೀರ ಬ್ರಹ್ಮ ಮಂದಿರಗಳು. ಎಲ್ಲಾ ಮಂದಿರಗಳಲ್ಲೂ ಚೌಕಾಕಾರದ ಗರ್ಭಗುಡಿ, ಕಲ್ಲಿನ ಮುಚ್ಚಿದ ಪ್ರದಕ್ಷಿಣ ಪೌಳಿ, ಮಂದಿರದ ಮೇಲಿನ ಭಾಗದಲ್ಲಿ ಚೌಕಾಕಾರದ ಗೋಪುರವಿದ್ದು, ಮೇಲೆ ಕಲಶವಿದೆ. ಕೆಲವು ಮಂದಿರಗಳಲ್ಲಿ ಕಲಶಗಳು ಬಿದ್ದುಹೋಗಿವೆ. ಸಂಕೀರ್ಣದಲ್ಲಿ ತೆಲುಗಿನಲ್ಲಿ ಬರೆದ ಶಿಲಾಶಾಸನಗಳನ್ನೂ ನೋಡಬಹುದು.

## ಪಿಸುಗುಡುವ ಭಗ್ನಾವಶೇಷಗಳು

ಹೆಚ್ಚಿನ ಮಂದಿರಗಳ ಮೂರ್ತಿಗಳು ಮತ್ತು ಮಂದಿರದ ಎದುರುಗಡೆ ಸ್ಥಾಪಿಸಿದ ನಂದಿ ಎಲ್ಲವೂ ಭಗ್ನಗೊಂಡಿವೆ. ಕೆಲವು ಮೂರ್ತಿಗಳನ್ನು ಈಗ ಪಕ್ಕದಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ನೋಡಬಹುದು. ಕೆಲವು ಮಂದಿರಗಳಲ್ಲಿ ಪಾಲಿಶ್ ಮಾಡಿದ ಶಿವಲಿಂಗವಿದ್ದರೂ ಬಾಲ ಬ್ರಹ್ಮ ಮಂದಿರದಲ್ಲಿ ಮಾತ್ರ ಪೂಜೆ ನಡೆಯುತ್ತಿದೆ. ಬಾಲ ಬ್ರಹ್ಮ ಮಂದಿರದಲ್ಲಿ ಎದುರಾಗುವುದು ದೊಡ್ಡ ನಂದಿ, ನಂತರ 'ಶಕ್ತಿ' ಮತ್ತು 'ಶಿವ'ನದದ್ದೆಂದು ಹೇಳುವ ಎರಡು ಜೋಡಿ ಪಾದಗಳು.

ಸಂಕೀರ್ಣದಲ್ಲಿರುವ ಕುಮಾರ ಬ್ರಹ್ಮನ ಮಂದಿರ ಮೊದಲು ಕಟ್ಟಿಸಿದ್ದಾಗಿದ್ದರೆ, ಪದ್ಮ ಬ್ರಹ್ಮ ಕಡೆಯದಾಗಿ ಕಟ್ಟಿಸಿದ ಮಂದಿರ. ಪದ್ಮ ಬ್ರಹ್ಮ ಮಂದಿರದ ಶಿಖರ ಪೂರ್ಣಗೊಂಡಿಲ್ಲ. ಉಳಿದ ಮಂದಿರಗಳ ಎದುರಿಗೆ ಇರುವಂತೆ ಇಲ್ಲಿ ಮುಖ ಮಂಟಪವಿಲ್ಲ. ಆದರೆ ಕೆಲವು ಕ್ಲಿಷ್ಟಕರ ವಿನ್ಯಾಸಗಳಿವೆ. ಅರ್ಕ ಬ್ರಹ್ಮ ಮಂದಿರವು ಅತ್ಯಂತ ಭಗ್ನಗೊಂಡ ಮಂದಿರ, ಗಂಗಾ, ಯಮುನೆಯರ ವಿನ್ಯಾಸ ಬಿಟ್ಟರೆ ಇಲ್ಲಿ ಎಲ್ಲವೂ ಭಗ್ನವಾಗಿವೆ.

ಒಂಬತ್ತು ಮಂದಿರಗಳಲ್ಲಿ ಅತೀ ಆಕರ್ಷಕವಾದದ್ದು ವಿಶ್ವ ಬ್ರಹ್ಮ ಮಂದಿರ. ಮಂದಿರದ ವಾಸ್ತುಶಿಲ್ಪ ಪಟ್ಟದಕಲ್ಲಿನ ಗಳಗನಾಥ ಮಂದಿರವನ್ನು ಹೋಲುತ್ತದೆ. ಗರ್ಭಗುಡಿಯ ಕಂಬದಲ್ಲಿ ರಾಮಾಯಣ, ಗಂಧರ್ವ ಮತ್ತು ಸಿಂಹದ ಚಿತ್ರಗಳನ್ನು ಕೆತ್ತಿದ್ದರೆ ದ್ವಾರದಲ್ಲಿರುವ ಕಲ್ಲಿನಲ್ಲಿ ಗಜಲಕ್ಷ್ಮಿ, ಗಂಗಾ, ಯಮುನೆಯರ ಕೆತ್ತನೆಯಿದೆ. ಛಾವಣಿಯಲ್ಲಿ ಸುಂದರವಾದ ನಾಗನ ಜೋಡಿ ಮತ್ತು ಕಮಲದ ಚಿತ್ರಣವಿದೆ.

ಮಂದಿರದ ಹೊರ ಆವರಣದಲ್ಲಿ ಅತೀ ಸುಂದರವಾದ ಕೆತ್ತನೆಗಳಿವೆ. ಮುಖ್ಯವಾಗಿ ವಿಷ್ಣುವಿನ ದಶಾವತಾರಗಳು, ನಟರಾಜ, ಗಣೇಶ, ಸೂರ್ಯ, ಚಂದ್ರ, ಗಂಧರ್ವ, ಆಮೆಯನ್ನು ಹೊತ್ತಿರುವ ಕೊಕ್ಕರೆ, ಯಕ್ಷಿಣಿಯರಲ್ಲದೆ, ಸಮುದ್ರ ಮಥನದ ಕಥನದ ಕೆತ್ತನೆಯೂ ಇದೆ.

## ಜೋಗುಳಾಂಬೆಯ ಶಕ್ತಿಪೀಠ

ಭಾರತದ 18 ಶಕ್ತಿ ಪೀಠದಲ್ಲೊಂದಾದ 'ಜೋಗುಳಾಂಬ' ಮಂದಿರವೂ ಸಂಕೀರ್ಣದ ಭಾಗವಾಗಿದೆ. ಸಂಕೀರ್ಣದ ಹಿಂಬದಿಯಲ್ಲಿ ತುಂಗಭದ್ರ ನದಿಯ ದಂಡೆಯಿದೆ. ಪ್ರಶಾಂತ ವಾತಾವರಣ ಮನಸನ್ನು ಉಲ್ಲಸಿತಗೊಳಿಸುವಂತಿದೆ.

**ಹೋಗುವ ಮಾರ್ಗ:** ಹೈದರಾಬಾದಿನಿಂದ ಆಲಂಪುರಕ್ಕೆ ಸುಮಾರು 215 ಕಿ.ಮೀ. ದೂರ. ಮಂತ್ರಾಲಯದಿಂದ ಸುಮಾರು 110 ಕಿ.ಮೀ. ಅಂತರ.





